# ಎರಡನೆಯ ಬಿ.ಕಾಂ. ಪರೀಕ್ಷೆ, ಮೇ/ಜೂನ್ 2010
# (RSS)
## ಕನ್ನಡ ಭಾಷೆ (ಪತ್ರಿಕೆ - ೨)
## ಪ್ರಾಚೀನ ಕನ್ನಡ ಕಾವ್ಯಭಾಗಗಳು, ತುಘಲಕ್ ಮತ್ತು ವಾಣಿಜ್ಯ ಕನ್ನಡ
## ಹೊಸ ಪಠ್ಯಕ್ರಮ : 2005-06ರಿಂದ 2009-10ರ ಸಾಲಿನ ವಿದ್ಯಾರ್ಥಿಗಳಿಗೆ

ಗಂಟೆ : 3 ಗಂಟೆಗಳು ಗರಿಷ್ಠಾಂಕ : 90

### ಎ – ವಿಭಾಗ

1. **ಒಂದರ** ಭಾವವನ್ನು ಸಂದರ್ಭಸಹಿತ ವಿವರಿಸಿ : **5**

1.1) ಸಿಂಗದ ಮುಪ್ಪುಂ ನೆಗಟ್ದೀ

ಗಾಂಗೇಯರ ಮುಪ್ಪುಮಿ ಟಿಕೆವಡೆಗುಮೆ ವನಮಾ

ತಂಗಂಗಳಿನಸುಹೃಚ್ಚತು

ರಂಗ ಬಲಂಗಳಿನದೆಂತುಮಂಗಾಧಿಪತೀ !

1.2) ಏಕೋ ನನಗೆ ಸ್ವಲ್ಪ ದಣಿವೆನ್ನಿಸಹತ್ತಿದೆ. ಒಮ್ಮಿಂದೊಮ್ಮೆಲೆ ನಿದ್ರೆಯೂ ಬರುತ್ತಿದೆ. ಐದು ವರುಷ ನನ್ನ ಸಮೀಪ ಸುಳಿಯದ ನಿದ್ರೆ ಈಗೊಮ್ಮೆಲೆ ಬಂದಿದೆ. ನೀನು ಹೋಗುವುದಿದ್ದರೆ ಹೋಗು, ಬರನಿ. ಮರಳಿ ಬೀಳ್ಕೊಡುವುದೇಕೆ ? ಆದರೆ ನೀನು ಹೋಗುವ ಮೊದಲು ನಮ್ಮೆಲ್ಲರಿಗಾಗಿ ಪ್ರಾರ್ಥಿಸಿಹೋಗು.

2. 2.1) **ಆರು** ಪದಗಳಿಗೆ ಅರ್ಥ ಬರೆಯಿರಿ : **(½×6=3)**

ಅಳವು, ಮಾತಂಗ, ಮುನ್ನೀರ್, ಸಂಗರ, ರಿಪು, ಅವನಿ, ಹರಿಣ, ಪುರಂದರ, ಶಹರ, ಫಿರ್ಯಾದು.

2.2) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×2=4)**

ಜನ್ನ, ಬಸವಣ್ಣ, ಬರನಿ, ದೌಲತಾಬಾದ್

3. **ನಾಲ್ಕರ** ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ : **(2×4=8)**

(ಪ್ರತಿ ಪಠ್ಯದಿಂದ **ಎರಡಕ್ಕಿಂತ** ಹೆಚ್ಚು ಉತ್ತರಿಸಬಾರದು)

3.1) ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೆ ?

3.2) ನಿಯತಿಯನಾರ್ ಮೀಱಿದಪರ್.

3.3) ಎತ್ತು ಹೇರುಗಳಿಂದ ಹೊತ್ತು ಮಾರುವುದಿಲ್ಲ.

3.4) ತಾನಿಕ್ಕಿದ ತತ್ತಿಯನೆ ಪಾವು ನೊಣೆವಂತಕ್ಕುಂ.

3.5) ನನಗೆ ರಾಜ್ಯದಲ್ಲಿ ಸಮತೆ ಬೇಕು, ಪ್ರಗತಿ ಬೇಕು.

3.6) ನನ್ನ ಹಿಂಸೆಯ ಬೇರು ನನ್ನ ತಲೆಯಲಿಲ್ಲ.

3.7) ಧೈರ್ಯ, ಪ್ರಾಮಾಣಿಕತೆ, ಪ್ರೀತಿ ! ಇಲ್ಲಿ ರಾಜಕಾರಣದ ಚರ್ಚೆ ನಡೆದಿದೆ.

3.8) ನನ್ನ ಕಿಸೆಯಲ್ಲಿ ಕವಡಿ ಇರಲಿಲ್ಲ. ಹೊಟ್ಟೆಯಲ್ಲಿ ಅನ್ನದ ಕಣ ಇರಲಿಲ್ಲ.

**ಬಿ – ವಿಭಾಗ**

4. 4.1) ತಾಯಿ ಮತ್ತು ತೌರಿನ ಬಗ್ಗೆ ಜನಪದರ ವಿಶೇಷ ಭಾವನೆಗಳಾವುವು ? ವಿವರಿಸಿ. **10**

**ಅಥವಾ**

ಜನ್ನ ಕವಿ ಅಮೃತಮತಿಯ ಪಾತ್ರವನ್ನು ಹೇಗೆ ಚಿತ್ರಿಸಿದ್ದಾನೆ ?

4.2) **ಎರಡನ್ನು** ಕುರಿತು ಬರೆಯಿರಿ : **(5×2=10)**

1) ಕೃಷ್ಣ ಕರ್ಣರ ಸಂವಾದ

2) 'ಒಡೆಯನಿಲ್ಲದ ಮನೆಯ ಕುರುಹುಗಳಾವುವು'

3) ಅಕ್ಕಮಹಾದೇವಿ

4) ಕನಕದಾಸ.

5. 5.1) ಮಹಮ್ಮದ್-ಬಿನ್-ತುಘಲಕ್‌ನ ವ್ಯಕ್ತಿತ್ವವನ್ನು ಚಿತ್ರಿಸಿ. **10**

**ಅಥವಾ**

ರಾಜಧಾನಿ ಬದಲಾವಣೆಗಳಿಗೆ ಕಾರಣಗಳಾವುವು ? ವಿವರಿಸಿ.

5.2) **ಎರಡನ್ನು** ಕುರಿತು ಬರೆಯಿರಿ : **(5×2=10)**

1) ಶೇಖ್ ಇಮಾಮುದ್ದೀನ

2) ಅಝೀಝು

3) ತುಘಲಕ್‌ನ ಆಡಳಿತ ನೀತಿ

4) ಸಾಂಕೇತಿಕ ನಾಣ್ಯ.

## ಸಿ – ವಿಭಾಗ
## ವಾಣಿಜ್ಯ ಕನ್ನಡ (30 ಅಂಕಗಳು)

6. ಈ ಕೆಳಗಿನ ಗದ್ಯಭಾಗವನ್ನು ಸಂಕ್ಷೇಪಿಸಿ. **8**

ಬೆಲೆ ಏರಿಕೆಯಲ್ಲಿ ಪ್ರಮುಖ ಸ್ಥಾನವನ್ನು ಮಧ್ಯಸ್ಥಗಾರರು ವಹಿಸಿಕೊಂಡಿದ್ದಾರೆ. ಬೆಳೆಗಾರರಿಗಿಂತ, ತಯಾರಕರಿಗಿಂತ, ಉತ್ಪಾದಕರಿಗಿಂತ ಈ ಮಧ್ಯಸ್ಥಗಾರರು ವಸ್ತುಗಳನ್ನು ಕೊಂಡು ದಾಸ್ತಾನು ಮಾಡಿ, ಕೃತಕ ಅಭಾವವನ್ನು ಸೃಷ್ಟಿ ಮಾಡಿ, ಬೆಲೆ ಏರಿಸಿ ಮಾರಾಟ ಮಾಡುತ್ತಾರೆ. ಇಂಥ ವಿಚಾರಗಳು ಸರ್ಕಾರ ಮತ್ತು ಅಪರಾಧ ತನಿಖಾ ದಳದವರಿಗೆ ತಿಳಿದಿದ್ದರೂ ಯಾವುದೋ ದಾಕ್ಷಿಣ್ಯಕ್ಕೆ ಒಳಗಾಗಿ ತೆಪ್ಪಗಿರುವುದರಿಂದ ಈ ಮಧ್ಯಸ್ಥಗಾರರು ಸಮಾಜವನ್ನು ಶೋಷಣೆ ಮಾಡುತ್ತಲೇ ಐಷಾರಾಮದ ಜೀವನವನ್ನು ನಡೆಸುತ್ತಾರೆ.

ಬೆಲೆ ಏರಿಕೆಯನ್ನು ತಡೆಯಲು ಜನರಲ್ಲಿ / ಗ್ರಾಹಕರಲ್ಲಿ ಹೆಚ್ಚಿನ ಅರಿವು ಮೂಡಬೇಕು. ಸಮಾಜದಲ್ಲಿ ಏಕತೆ ಉಂಟಾಗಬೇಕು. ಒಂದು ವಸ್ತುವಿನ ಬೆಲೆ ನಿಗದಿ ಮೀರಿದಾಗ ಆ ವಸ್ತುವನ್ನು ಕೊಳ್ಳದೆ ಗಂಭೀರ ಪ್ರತಿಭಟನೆಯನ್ನು ತೋರಬೇಕು. ಬೆಲೆ ಏರಿಕೆಯನ್ನು ಸಾಂಘಿಕವಾಗಿ ವಿರೋಧಿಸಬೇಕು. ಆರ್ಥಿಕವಾಗಿ ಸಬಲರಾಗಿರುವವರಲ್ಲಿ ಇಲ್ಲದವರ ಹಿತವನ್ನು ರಕ್ಷಿಸುವುದು ತಮ್ಮ ಆದ್ಯ ಕರ್ತವ್ಯವೆಂಬ ಪ್ರಜ್ಞೆ ಜಾಗೃತವಾಗಬೇಕು. ಸರ್ಕಾರ ಶ್ರೀಸಾಮಾನ್ಯನ ಜೀವನ ನಿರಾತಂಕವಾಗಿ ಸಾಗಬೇಕೆಂಬ ಧೋರಣೆಯನ್ನು ಪ್ರಾಮಾಣಿಕವಾಗಿ, ದೃಢವಾಗಿ ತಾಳುವವರೆಗೂ ಬೆಲೆ ಏರಿಕೆ ನಿಲ್ಲುವುದಿಲ್ಲ. ಮನುಷ್ಯರ ಹಿತರಕ್ಷಣೆಯ ಬಗ್ಗೆ ಮನುಷ್ಯರೇ ಯೋಚಿಸದಿದ್ದರೆ, ಸಹಕರಿಸದಿದ್ದರೆ, ಮಾನವರ ಸಮಸ್ಯೆ ಪರಿಹಾರವಾಗಲಾರದು. ಇದಕ್ಕೆ ಬೆಲೆ ಏರಿಕೆಯೂ ಹೊರತಲ್ಲ.

7. ಆಕ್ಷೇಪಣಾ ಪತ್ರವನ್ನು ಬರೆಯುವಾಗ ಗಮನಿಸಬೇಕಾದ ಅಂಶಗಳಾವುವು ? ಮಾದರಿಯೊಂದಿಗೆ ವಿವರಿಸಿ. **8**

**ಅಥವಾ**

ಉದರಿ ಪತ್ರ ಎಂದರೇನು ? ವಾಣಿಜ್ಯ ಕ್ಷೇತ್ರದಲ್ಲಿ ಇದರ ಅಗತ್ಯತೆಯನ್ನು ಕುರಿತು ಬರೆಯಿರಿ.

8. ವಿಮೆ ಎಂದರೇನು ? ವಿಮಾಪತ್ರದ ಮಾದರಿಗಳೊಂದಿಗೆ ವಿವರಿಸಿ. **8**

**ಅಥವಾ**

ಹುದ್ದೆಗಳ ಜಾಹೀರಾತು ಪತ್ರ ಒಳಗೊಂಡಿರುವ ಅಂಶಗಳಾವುವು ? ಮಾದರಿಯೊಂದಿಗೆ ವಿವರಿಸಿ.

9. **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×3=6)**

9.1) ವಾಣಿಜ್ಯ ಪತ್ರದ ಲಕ್ಷಣಗಳು

9.2) ವಿಚಾರಣಾ ಪತ್ರ

9.3) ಸಾಲಸೋರಿಕೆ

9.4) ವರದಿ ಪತ್ರ.